
# 18-07-2026


ವಿದ್ಯಾವರ್ಧಕ ಸಂಘ (ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570 001
ಕನ್ನಡ ವಿಭಾಗದ ವತಿಯಿಂದ
ಗಮಕ ವಾಚನ ಕಾರ್ಯಾಗಾರ
ಉಪಸ್ಥಿತಿ
ಅಧ್ಯಕ್ಷತೆ
ಸ್ಥಳ : ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ

# TRADITIONAL ART OF GAMAKA CELEBRATED AT VVFGC, MYSURU

The rich literary and cultural heritage of Karnataka came alive at Vidyavardhaka FGC, Sheshadri Iyer Road, Mysuru. The Dept. of Kannada Studies organized a specialized workshop and performance on "*Gamaka Vaachana*". The event centered around a themed performance titled "*Lokada Lalaneyara Pariyalla thannaya roopu*" from the epic "*Kumaravyasa Bharatha*" drew a large gathering of faculty and students. The programme held at Sri P M Chikkaboraiah Auditorium focused the structural and emotional essence of classical Kannada literature. During the session, the experts deeply explored the meaning and profound importance of Gamaka as an indispensable tool to understand the depth of classical Kaavya, particularly highlighting its application in the dramatic segments of "*Keechaka Vadha*". The cultural session featured a captivating recital by Vidushi Shubha Raghavendra, a renowned vocalist and Gamaka Exponent from Mysuru who brought the epic verses to life with her melodious rendering. Following the recital Dr.Vidwan. Kru.Pa. Manjunath a celebrated lecturer and Gamaka commentator delivered an insightful commentary. (Vyakhyana)

Presiding over the event Dr.S.MariGowda, Principal of the college formerly inaugurated the session and expressed his heartfelt wishes for the success of the programme. In his presidential address, he emphasized the importance of preserving traditional art form like Gamaka in modern educational institutions to keep the younger generation well connected to their roots.

Kum.Dhatri of 2$^{nd}$ BCom invocated. Dr.Srinivas T, Head Department of Kannada welcomed the gathering. Prof. Hema compered the programme.. Vote of thanks was rendered by Prof. Chaluvaraju M L.

(Dr.S.MariGowda)

## ಗಮಕ ಕುರಿತು ಕಾರ್ಯಗಾರ ಹಾಗೂ ಗಮಕ ವಾಚನಾ, ವ್ಯಾಖ್ಯಾನ ಕಾರ್ಯಕ್ರಮ

ಭಾರತ ದೇಶದಲ್ಲಿ ಚಾಲ್ತಿಯಲ್ಲಿರುವ ೬೪ ಕಲೆಗಳಲ್ಲಿ ಗಮಕ ಕಲೆಯೂ ಒಂದು. ಅದೊಂದು ವಿಶೇಷವಾದಂತ ಕಲೆ. ಮೊದಲಿಗೆ ಹಳಗನ್ನಡ ಕಾವ್ಯಗಳಲ್ಲಿ ಗದ್ಯ ಮತ್ತು ಪದ್ಯ ಮಿಶ್ರಣವಾದ ಚಂಪೂಶೈಲಿಯ ಕಾವ್ಯಗಳನ್ನು ಗಮಕ ಕಲೆಯ ಮೂಲಕ ಕೇಳುಗರಿಗೆ ಪರಿಣಾಮಕಾರಿಯಾಗಿ ನಿರೂಪಿಸುತ್ತಿದ್ದರು ಎಂದು ಖ್ಯಾತ ಗಮಕ ವಿದ್ವಾನ್ ಕೃಪಾ.ಮಂಜುನಾಥ್‌ರವರು ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗವು ಆಯೋಜಿಸಿದ್ದ ಪಠ್ಯಾಧಾರಿತ ಕುಮಾರವ್ಯಾಸ ಭಾರತದ ವಿರಾಟ ಪರ್ವದ ಕಾವ್ಯದ ಕೀಚಕ ವಧಾ ಪ್ರಸಂಗದ ಆಯ್ದ ಭಾಗಗಳ ಗಮಕ ವಾಚನ ಮತ್ತು ವ್ಯಾಖ್ಯಾನ ಕಾರ್ಯಗಾರದಲ್ಲಿ ಮುಖ್ಯ ವ್ಯಾಖ್ಯಾನಕಾರರಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ಪಂಪ ಕವಿಯ ಕಾಲದಲ್ಲಿ ಗಮಕ ಕಲೆಯನ್ನು ಹೊಂದಿದವನನ್ನು ವಾಗ್ಮಿ ಎಂದು ಕರೆಯುತ್ತಿದ್ದರು.

ಮೈಸೂರಿನ ಖ್ಯಾತ ಗಮಕ ವಾಚಕಿ ಹಾಗೂ ಗಾಯಕಿ ವಿದುಷಿ ಶುಭ ರಾಘವೇಂದ್ರ ಅವರು ಕುಮಾರವ್ಯಾಸ ಭಾರತದ ವಿರಾಟ ಪರ್ವದ ತುಣುಕಾದ "ಲೋಕದ ಲಲನೆಯರ ಪರಿಯಲ್ಲ ತನ್ನಯ ರೂಪು" ಎನ್ನುವ ಪದ್ಯವನ್ನು ವಾಚಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡುತ್ತಾ ತಾವು ಮೂಲತಃ ವಾಣಿಜ್ಯ ಪ್ರಾಧ್ಯಾಪಕರಾದರೂ ಶಾಲಾ ಹಂತದಲ್ಲಿ ಕನ್ನಡವನ್ನು ಕಲಿತ ಬಗ್ಗೆ ಹಾಗೂ ತಮ್ಮ ಕನ್ನಡ ವಿಷಯದ ಗುರುಗಳು ವಿಷಯವನ್ನು ಅರ್ಥೈಸಿದ ಪರಿ ಹಾಗೂ ವಿದ್ಯಾರ್ಥಿಗಳ ಮೇಲೆ ಅವರು ಬೀರುತ್ತಿದ್ದ ಪ್ರಭಾವ ಇವೆಲ್ಲವು ತಮ್ಮ ಮೇಲೆ ಉಂಟು ಮಾಡಿದ ಭಾಷಾಭಿಮಾನವನ್ನು ಸ್ಮರಿಸಿಕೊಂಡರು.

ಕು.ಧಾತ್ರಿ ಎ ಪ್ರಾರ್ಥಿಸಿದ ಕಾರ್ಯಕ್ರಮವನ್ನು ಕನ್ನಡ ವಿಭಾಗದ ಮುಖ್ಯಸ್ಥ ಡಾ.ಶ್ರೀನಿವಾಸ.ಟಿ ಸ್ವಾಗತಿಸಿ, ಕು.ಹೇಮ.ಕೆ.ಎಂ ನಿರೂಪಿಸಿದರು. ವಿದ್ಯಾರ್ಥಿಗಳೂ, ಬೋಧಕರು, ಬೋಧಕೇತರರು ಹಾಗೂ ಆಸಕ್ತ ಶ್ರೋತೃಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ಶ್ರೀ.ಚೆಲುವರಾಜು.ಎಂ.ಎಲ್ ವಂದಿಸಿದರು.

























